**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.647/2021**

ಪಿ.ಡಬ್ಲ್ಯೂ: 8

ಸಿ.ಡಬ್ಲ್ಯೂ: 8

ಸಾಕ್ಷಿದಾರರ ಹೆಸರು : ರಮೇಶ್
ತಂದೆಯ ಹೆಸರು: : ನಂಜೇಗೌಡ
ವಯಸ್ಸು : **52 ವರ್ಷ**
ಉದ್ಯೋಗ : ವ್ಯವಸಾಯ
ವಾಸಸ್ಥಳ : ರಂಗೇನಹಳ್ಳಿ

**ದಿನಾಂಕ: 07-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ತರೀಕೆರೆಯ ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಬಂಗಾರದ ಒಡವೆಗಳನ್ನು ಅಮಾನತ್ತುಪಡಿಸಿಕೊಂಡು ಚಾಸಾ-1 ರವರಿಗೆ ಕಳ್ಳತನವಾದ ಒಡವೆಗಳನ್ನು ಕೊಡುವುದರ ಬಗ್ಗೆ ಪೊಲೀಸರು ಮಹಜರ್ ಕ್ರಮವನ್ನು ಜರುಗಿಸಿದ್ದು, ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ, ನನ್ನ ಸಮಕ್ಷಮ ಪೊಲೀಸರು ಒಂದು ಜೊತೆ ಜುಮುಕಿ, ಒಂದು ಪ್ಲೇಟು, ಒಂದು ಉಂಗುರವನ್ನು ಚಾಸಾ-1 ರವರಿಗೆ ನೀಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಹೆಚ್ ಸಿ ಎಸ್ **ವಕೀಲರಿಂದ.**

ಚಾಸಾ-1 ರವರು ಮಹಜರ್ ಗೆ ಸಹಿ ಮಾಡಲು ಕರೆದಿರುತ್ತಾರೆ. ಚಾಸಾ-1 ರವರು ನಮ್ಮ ಬೀದಿಯಲ್ಲಿದ್ದು ನನಗೆ ಪರಿಚಯವಿರುತ್ತಾರೆಂದರೆ ಸರಿ. ಪೊಲೀಸರು ಮಹಜರ್ ಗೆ ಸಹಿ ಮಾಡಲು ಯಾವುದೇ ನೋಟಿಸ್ ನೀಡಿರುವುದಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಕುಳಿತಿದ್ದು, ಪೊಲೀಸರು ಮಹಜರ್ ನ್ನು ಬೆರಳಚ್ಚು ಮಾಡಿರುತ್ತಾರೆ. ಬೆರಳಚ್ಚು ಮಾಡುವ ಸಮಯದಲ್ಲಿ ನಾನು

ಠಾಣೆಯ ಹೊರಗೆ ಕಾಯುತ್ತಿದ್ದೆ. ಯಾವ ದಿನದಂದು ಮತ್ತು ಯಾವ ಸಮಯದಲ್ಲಿ ಮಹಜರ್ ಬರೆದಿರುತ್ತಾರೆದು ನನಗೆ ನೆನಪಿಲ್ಲ. ಪೊಲೀಸರು ಮಹಜರ್ ನ್ನು ಬೆರಳಚ್ಚು ಮಾಡಿದ ನಂತರ ನನ್ನನ್ನು ಕರೆದಿದ್ದು ಮಹಜರ್ ನ್ನು ನಾನು ಓದಿ ಸಹಿ ಮಾಡಿರುತ್ತೇನೆ. ಒಡವೆಗಳ ಡಿಸೈನ್ ಹಾಗೂ ಗ್ರಾಂ ನನಗೆ ನೆನಪಿರುವುದಿಲ್ಲ. ಮಹಜರ್ ಸಮಯದಲ್ಲಿ ಛಾಯಚಿತ್ರವನ್ನು ತೆಗೆದಿರುವ ಬಗ್ಗೆ ನನಗೆ ನೆನಪಿಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುವುದಿಲ್ಲ. ಚಾಸಾ-1 ನಿಮಗೆ ಪರಿಚಯ ಇರುವ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>: ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**